# "ನಾನು ಶ್ರೀರಾಮಕೃಷ್ಣರನ್ನು ಕಂಡಿದ್ದೇನೆ"


## ರಾಮೇಂದ್ರಸುಂದರ ಭಟ್ಟಾಚಾರ್ಯ

ಅನುವಾದ

ಸ್ವಾಮಿ ಕರುಣಾಕರಾನಂದ




**ರಾಮೇಂದ್ರಸುಂದರ ಭಟ್ಟಾಚಾರ್ಯರು 'ಶ್ರೀ ಶ್ರೀರಾಮಕೃಷ್ಣ ಭಾಗವತಮ್' ಎಂಬ ಗ್ರಂಥದ ಲೇಖಕರು. ಇವರು ಕೊಲ್ಕತಾದ ಹಾತಿಬಾಗಾನ್ ಎಂಬಲ್ಲಿ ಇರುವ ಸಂಸ್ಕೃತ ಪಾಠಶಾಲೆಯ ಸಂಸ್ಥಾಪಕರು ಹಾಗೂ ಪ್ರಾಂಶುಪಾಲರು ಕೂಡ ಆಗಿದ್ದರು. ಇವರಿಗೆ ೧೯೭೧ ರಲ್ಲಿ ಭಾರತ ಸರ್ಕಾರವು 'ಅತ್ಯುತ್ತಮ ಶಿಕ್ಷಕ' ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಈ ಲೇಖನದಲ್ಲಿರುವ ಅವರ ನೆನಪುಗಳನ್ನು ಅವರು ಬರೆದದ್ದು ಅವರಿಗೆ ನೂರು ವರ್ಷ ವಯಸ್ಸು ತುಂಬಿದ್ದಾಗ. ಈ ಸ್ಮೃತಿಲೇಖನವನ್ನು ಸ್ವಾಮಿ ಪೂರ್ಣಾತ್ಮಾನಂದರು ಬಂಗಾಳಿ ಭಾಷೆಯ 'ಯುಗಪುರುಷ್ ಶ್ರೀರಾಮಕೃಷ್ಣ' ಎಂಬ ಗ್ರಂಥದಲ್ಲಿ ಸಂಪಾದಿಸಿದ್ದಾರೆ. ಅದರ ಆಯ್ದ ಭಾಗದ ಅನುವಾದ ಇದು.**

**ನ**ನಗಾಗ ಎಂಟು ವರ್ಷ ವಯಸ್ಸು. ನನ್ನ ತಂದೆಯೊಂದಿಗೆ ರಾಣಿ ರಾಸಮಣಿಯ ಕಾಳೀ ದೇಗುಲಕ್ಕೆ ಹೋಗಿದ್ದೆ. ನನಗೆ ನೆನಪಿದ್ದಂತೆ ಅದು ಬೇಸಿಗೆ ಕಾಲದ ಒಂದು ಬೆಳಗಿನ ಜಾವ. ನಮ್ಮ ಮನೆ ಮೇದಿನೀಪುರ ಜಿಲ್ಲೆಯ ಬಗಡೀ ಕೃಷ್ಣನಗರ್ ಎಂಬ ಪ್ರದೇಶದಲ್ಲಿರುವ ಖೂನ್‌ಬೇಡಿಯಾ ಹಳ್ಳಿಯಲ್ಲಿತ್ತು. ಅಲ್ಲಿಂದ ಕಾಮಾರಪುಕುರಕ್ಕೆ ೨೦ ಮೈಲಿ ದೂರ. ನನ್ನ ತಂದೆ ಶ್ರೀರಾಮಕೃಷ್ಣರ ಸಮವಯಸ್ಕರಾಗಿದ್ದರು; ಬಾಲ್ಯದಿಂದಲೇ ಅವರಿಬ್ಬರಿಗೂ ಪರಸ್ಪರ ಪರಿಚಯವಿದ್ದಿತು; ವಿಶೇಷವಾದ ಸ್ನೇಹವೂ ಇತ್ತು. ನಮ್ಮ ತಂದೆಯವರು ವರ್ಷಕ್ಕೆ ಎರಡು ಮೂರು ಸಲ ಕೊಲ್ಕತಾಗೆ ಹೋಗಿ ಉಳಿದುಬಿಡುತ್ತಿದ್ದರು. ಹಳ್ಳಿಯಿಂದ ಕೊಲ್ಕತಾಗೆ ಹೋದಾಗ ಮತ್ತು ಅಲ್ಲಿಂದ ತಿರುಗಿಬರುವಾಗ ದಕ್ಷಿಣೇಶ್ವರಕ್ಕೆ ಭೇಟಿ ನೀಡಿ, ಕಾಮಾರಪುಕುರದ ಸುದ್ದಿ ಏನಾದರೂ ಇದ್ದರೆ, ಅದನ್ನು ಶ್ರೀರಾಮಕೃಷ್ಣರಿಗೆ ತಿಳಿಸುತ್ತಿದ್ದರು. ಹಾಗೆಯೇ ಕಾಮಾರಪುಕುರಕ್ಕೆ ಏನಾದರೂ ಸುದ್ದಿ ಮುಟ್ಟಿಸುವುದಿದ್ದರೆ ಅವರಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು.

ಒಮ್ಮೆ ನನ್ನ ತಂದೆಯವರು ನನಗೆ ಹೇಳಿದರು, "ನಡಿ, ನಿನ್ನನ್ನು ಇವತ್ತು ಒಂದು ಜಾಗಕ್ಕೆ ಕರೆದುಕೊಂಡು ಹೋಗುತ್ತೇನೆ. ಅಲ್ಲಿ ತಾಯಿ ಕಾಳಿಯ ಪ್ರಸಿದ್ಧ ದೇವಾಲಯವನ್ನು ನೋಡುತ್ತೀಯೆ. ಹಾಗೆಯೆ ಜೀವಂತ ಭಗವಂತನ ದರ್ಶನ ಕೂಡ ಮಾಡುತ್ತೀಯೆ." ದಕ್ಷಿಣೇಶ್ವರ ದೇವಾಲಯದಲ್ಲಿ ತಾಯಿ ಭವತಾರಿಣಿಗೆ ನಮಸ್ಕರಿಸಿದ ಮೇಲೆ, ತಂದೆಯವರು ನನ್ನನ್ನು ಶ್ರೀರಾಮಕೃಷ್ಣರ ಕೊಠಡಿಗೆ ಕರೆದುಕೊಂಡು ಹೋದರು. ಠಾಕೂರರು ಆಗ ಅಲ್ಲಿರಲಿಲ್ಲ. ಒಬ್ಬ ವ್ಯಕ್ತಿ ಬಂದು ಶ್ರೀರಾಮಕೃಷ್ಣರು ಪಂಚವಟಿಯ ಕಡೆಗೆ ಹೋಗಿದ್ದಾರೆಂದು ಹೇಳಿದರು. ಠಾಕೂರರು ಪಂಚವಟಿಯ ಎದುರು ನಿಂತುಕೊಂಡು ತಮ್ಮ ಯುವಕ ಭಕ್ತರ ಜೊತೆ ಗಂಗೆಯ ದರ್ಶನ ಮಾಡುತ್ತಿದ್ದರು. ನಮ್ಮ ತಂದೆಯವರನ್ನು ನೋಡಿ ಅವರಿಗೆ ಬಹಳ ಸಂತೋಷವಾಯಿತು. ಇಬ್ಬರೂ ಪರಸ್ಪರರ ಕುಶಲಸಮಾಚಾರಗಳನ್ನು ವಿಚಾರಿಸಿದರು. ಅನಂತರ ನಮ್ಮ ತಂದೆಯವರು ಶ್ರೀರಾಮಕೃಷ್ಣರಿಗೆ ದೀರ್ಘದಂಡಪ್ರಣಾಮ ಮಾಡಿ, ಅವರ ಪಾದಧೂಳಿಯನ್ನು ಸ್ವೀಕರಿಸಿದರು. ನನ್ನ ಹಣೆಗೂ ಅದನ್ನು ಹಚ್ಚಿದರು. ಅನಂತರ ಹೇಳಿದರು, "ನಿನಗೆ ಹೇಳಿದ್ದೆನಲ್ಲ, ಜೀವಂತ ಭಗವಂತನನ್ನು ತೋರಿಸುತ್ತೇನೆ ಎಂದು. ಇವರೇ ಆ ಜೀವಂತ ಭಗವಂತ. ಇವರ ಚರಣಸ್ಪರ್ಶ ಮಾಡಿ ಕೃತಾರ್ಥನಾಗು." ಹೀಗೆ ಹೇಳಿ, ನನ್ನ ತಂದೆಯವರು, ತಾವೇ ನನ್ನ ತಲೆಯನ್ನು ಠಾಕೂರರ ಪಾದಗಳ ಮೇಲೆ ಇರಿಸಿದರು. ನಾನು ಶ್ರೀರಾಮಕೃಷ್ಣರಿಗೆ ಪ್ರಣಾಮ ಮಾಡಿದಾಗ ಅವರು ತಮ್ಮ ಕೈಯನ್ನು ನನ್ನ ತಲೆಯ ಮೇಲಿಟ್ಟು ಹೇಳಿದರು, "ಮಗು, ಏಳು, ಏಳು." ನಾನು ಎದ್ದು ನಿಂತುಕೊಂಡ ಮೇಲೆ ಮತ್ತೆ ಹೇಳಿದರು: "ನೀನು ದೀರ್ಘಾಯುಷಿಯಾಗುವೆ, ಪಂಡಿತನೂ ಆಗುವೆ." ಅವರ ಪಾದಗಳಲ್ಲಿ ತಲೆಯನ್ನಿಟ್ಟು ನಮಸ್ಕರಿಸಿದ್ದು, ಅನಂತರ ನನ್ನ ತಲೆಯ ಮೇಲೆ ಅವರು ಕೈಯನ್ನಿಟ್ಟು ಆಶೀರ್ವಾದ ಮಾಡಿದ್ದು – ಇವೆಲ್ಲ ನಡೆಯುವಾಗ ನಾನೊಂದು ಬಗೆಯ ಉನ್ಮಾದದ ಸ್ಥಿತಿಯಲ್ಲಿ ಇದ್ದೆ. ಆದರೆ ಶ್ರೀರಾಮಕೃಷ್ಣರ ಮಾತುಗಳು ಮಾತ್ರ ನನ್ನ ಕಿವಿಗಳನ್ನು ಪ್ರವೇಶಿಸಿ, ಅಲ್ಲಿ ಪ್ರತಿಧ್ವನಿಸುತ್ತಿದ್ದವು.

ಆ ದಿನ ನಮ್ಮ ತಂದೆಯವರು ಠಾಕೂರರ ಜೊತೆಯಲ್ಲಿ ಒಂದಷ್ಟು ಮಾತುಕತೆಯಾಡಿ ಕೊಲ್ಕತಾಗೆ ಹಿಂತಿರುಗಿದರು. ಅದೇ

ನಾನು ಅವರನ್ನು ಮೊದಲ ಹಾಗೂ ಕೊನೆಯ ಬಾರಿ ಕಂಡದ್ದು. ಆಗ ನನಗೆ ತುಂಬ ಸಣ್ಣ ವಯಸ್ಸು. ಅಷ್ಟು ಚಿಕ್ಕ ವಯಸ್ಸಿನಲ್ಲಿ ನಡೆದ ಘಟನೆಗಳನ್ನು ನೆನಪಿಗೆ ತಂದುಕೊಳ್ಳುವುದು ಸಾಧ್ಯವಾಗದು. ಆದರೂ ಶ್ರೀರಾಮಕೃಷ್ಣರ ಆ ದಿವ್ಯವದನ ನನ್ನ ಮನಸ್ಸಿನಲ್ಲಿ ಇನ್ನೂ ಹಚ್ಚಹಸಿರಾಗಿಯೇ ಉಳಿದಿದೆ. ಅವರದು ದೀರ್ಘದೇಹ; ಸೌಮ್ಯ ಕಾಂತಿ ಹಾಗೂ ಪ್ರಸನ್ನವಾದ ನಗುವಿನಿಂದ ಕೂಡಿದ ಮುಖ! ಅವರ ಶರೀರದ ಬಣ್ಣ ಉಜ್ವಲ ಗೌರವರ್ಣವಲ್ಲದೆ ಹೋದರೂ, ಶ್ವೇತವರ್ಣದ್ದಾಗಿ ಇತ್ತು. ಠಾಕೂರರ ಸಾಧನಾಕಾಲದಲ್ಲಿ ಅವರ ಮೈಯ ಬಣ್ಣ ಬಂಗಾರದಂತೆ ಹೊಳೆಯುತ್ತಿತ್ತೆಂದು ನನ್ನ ತಂದೆಯವರು ಹೇಳುತ್ತಿದ್ದರು.

ಅವರ ಸಾಕ್ಷಾತ್ ದರ್ಶನದ ಎರಡೂವರೆ ವರ್ಷಗಳ ಬಳಿಕ, ಒಂದು ರಾತ್ರಿ ನನ್ನ ಕನಸಿನಲ್ಲಿ ಕೂಡ, ಠಾಕೂರರು ನನಗೆ ತಮ್ಮ ಪ್ರಥಮ ದರ್ಶನದಲ್ಲಿ ಹೇಗೆ ಕಾಣಿಸಿಕೊಂಡಿದ್ದರೊ ಹಾಗೆಯೆ ದರ್ಶನವಿತ್ತು, ಹೀಗೆ ನುಡಿದರು: "ಏನೋ ಹುಡುಗ? ಚೆನ್ನಾಗಿದ್ದೀಯಾ? ನಾನಿನ್ನು ಹೊರಟೆ". ಇದನ್ನು ಕೇಳಿ ನಾನು ಬೆಚ್ಚಿ ಬಿದ್ದು ಎದ್ದು ಕುಳಿತುಕೊಂಡೆ. ಅನಂತರ ನನಗೆ ತಿಳಿದು ಬಂತು, ಆ ರಾತ್ರಿಯೇ ಶ್ರೀರಾಮಕೃಷ್ಣರ ಮಹಾಸಮಾಧಿಯಾಯಿತು ಎಂದು.

ಅದಾಗಿ ಬಹಳ ವರ್ಷಗಳೇ ಕಳೆದವು. ನನಗೆ ಆಗ ಐವತ್ತು ವರ್ಷ ವಯಸ್ಸು. ಒಂದು ರಾತ್ರಿ ಕನಸಿನಲ್ಲಿ ಠಾಕೂರರು ನಾನು ಹಿಂದೆ ನೋಡಿದ್ದ ರೂಪದಲ್ಲಿಯೇ ಈಗಲೂ ಕಾಣಿಸಿಕೊಂಡು, "ಏನೋ ಪಂಡಿತ? ಸೌಖ್ಯ ತಾನೇ? ಸರಿಯಾಗಿ ಕೇಳಿಸಿಕೊ" ಎನ್ನುತ್ತ ಸಂಸ್ಕೃತದಲ್ಲಿ ಶ್ಲೋಕವೊಂದನ್ನು ಉಚ್ಚರಿಸಿದರು. ಆ ಶ್ಲೋಕ ಹೀಗಿತ್ತು:

**ಮಲ್ಲೀಲಾಂ ವಿಲಿಖ ತ್ವಂ ಭೋ ದೇವಭಾಷಾಯುತಾಂ ಸುಧೀಃ ।**
**ತ್ವಾಮಹಂ ಸಂವದಿಷ್ಯಾಮಿ ಮಾ ಭೈಷೀಃ ಪಂಡಿತೋ ಭವಾನ್ ॥**

**"ಎಲೈ ಪಂಡಿತನೇ, ನನ್ನ ಲೀಲೆಯನ್ನು ನೀನು ಸಂಸ್ಕೃತದಲ್ಲಿ ರಚಿಸು. ನಿನ್ನೊಂದಿಗೆ ನಾನು (ಆಗಾಗ) ಸಂಭಾಷಣೆ ನಡೆಸುತ್ತೇನೆ (ಮತ್ತು ನಿನ್ನ ಸಂದೇಹಗಳನ್ನು ನಿವಾರಿಸುತ್ತೇನೆ). ಹೆದರದಿರು. ನೀನೊಬ್ಬ ಪಂಡಿತ (ಅರ್ಥಾತ್, ನಿನ್ನಿಂದ ಈ ಕೆಲಸ ಸಾಧ್ಯ)."**

ಅವರು ನನಗೆ ಈ ಶ್ಲೋಕವನ್ನು ಮೂರು ಬಾರಿ ತಮ್ಮ ಜೊತೆ ಜೊತೆಯಲ್ಲಿಯೆ ಪುನಃ ಉಚ್ಚರಿಸಲು ಹೇಳಿದರು. ಆ ಶ್ಲೋಕವು ನನಗೆ ಕಂಠಪಾಠವಾಯಿತು. ನಿದ್ರೆಯಿಂದೆಚ್ಚೆತ್ತ ಮೇಲೆ ಅದನ್ನು ನಾನು ಕಾಗದವೊಂದರಲ್ಲಿ ಬರೆದಿಟ್ಟುಕೊಂಡೆ. ನಂತರ ಠಾಕೂರರು ನನ್ನನ್ನುದ್ದೇಶಿಸಿ ಹೇಳಿದರು: "ಹೇ ಪಂಡಿತ, ಸಂಸ್ಕೃತದಲ್ಲಿ ನೀನು ನನ್ನ ಜೀವನಚರಿತ್ರೆಯನ್ನು ಬರಿ." ನಾನು ಉತ್ತರಿಸಿದೆ: "ನನಗೆ ನಿಮ್ಮ ಕುರಿತು ಏನೂ ತಿಳಿಯದು. ನನ್ನ ಬಾಲ್ಯದಲ್ಲಿ ನಿಮ್ಮನ್ನೊಮ್ಮೆ ಕಂಡಿದ್ದೆನಷ್ಟೆ ಅದಾದ ನಂತರ ನಿಮ್ಮ ಲೀಲೆಯನ್ನು ಕುರಿತು ನಾನು ಏನೇನೂ ಚಿಂತಿಸಿಲ್ಲ. ಈಗ ನಿಮ್ಮ ಬಗ್ಗೆ ಹೇಗೆ ತಾನೆ ಬರೆಯಲಿ?" ಆಗ ಅವರು ಹೀಗೆ ಆಶ್ವಾಸನೆಯಿತ್ತರು: "ನಿನಗೆ ಯಾವ ಭಯವೂ ಬೇಡ; ಚಿಂತೆಯೂ ಬೇಡ. ಕಾಮಾರಪುಕುರ ಹಾಗೂ ದಕ್ಷಿಣೇಶ್ವರದ ಕಡೆ ಯಾರು ನನ್ನನ್ನು ಬಲ್ಲರೋ ಅವರು ನನ್ನ ಬಗ್ಗೆ ಮಾಹಿತಿಯನ್ನು ನೀಡುತ್ತಾರೆ. ಬೇಲೂರು ಮಠದಲ್ಲಿರುವ ನನ್ನ ಮಕ್ಕಳು (ಸಾಕ್ಷಾತ್ ಶಿಷ್ಯರು) ನನ್ನ ಕುರಿತಾದ ಅನೇಕ ಮಾಹಿತಿಗಳನ್ನು ನೀಡುವರು. ಅದೂ ಅಲ್ಲದೆ, ನಾನೂ ಆಗಾಗ್ಗೆ ಯಾವುದಾದರೂ ಘಟನೆಗೆ ಸಂಬಂಧಿಸಿದಂತೆ ನಿನಗೆ ಸಂದೇಹವೇನಾದರೂ ಇದ್ದರೆ, ನಿವಾರಿಸುತ್ತೇನೆ." ಆದರೆ, ಇದಾದನಂತರ ನಾನು ನನ್ನ ಸಂಸಾರದ ಹಾಗೂ ಅಧ್ಯಾಪನದ ಕೆಲಸಗಳಲ್ಲಿ ಮುಳುಗಿಹೋದೆ. ಪರಿಣಾಮವಾಗಿ ಠಾಕೂರರ ಪ್ರತ್ಯಕ್ಷಶಿಷ್ಯರು ಬದುಕಿದ್ದಾಗ ಅವರನ್ನು ಭೇಟಿ ಮಾಡಿ, ಅಗತ್ಯವಾದ ಮಾಹಿತಿಗಳನ್ನು ಸಂಗ್ರಹಿಸುವ ಕಾರ್ಯ ನನಗೆ ಸಾಧ್ಯವಾಗಲಿಲ್ಲ. ಆದರೆ, ಕಾಮಾರಪುಕುರ ಮತ್ತು ದಕ್ಷಿಣೇಶ್ವರದ ಹಲವು ಭಾಗಗಳಲ್ಲಿ ಶ್ರೀರಾಮಕೃಷ್ಣರನ್ನು ನೋಡಿದ್ದವರ ಬಳಿಯಿಂದ ವಿಷಯ ಸಂಗ್ರಹಣೆ ಮಾತ್ರ ಅಲ್ಪ ಸ್ವಲ್ಪ ನನಗೆ ಸಾಧ್ಯವಾಯಿತು.


ಶ್ರೀರಾಮಕೃಷ್ಣರ ಜೀವನಚರಿತ್ರೆ ಎಲ್ಲರಿಗೂ ಸುಪರಿಚಿತವೇ. ಮುಖ್ಯವಾಗಿ ಸ್ವಾಮಿ ಶಾರದಾನಂದರು ಬರೆದ 'ಶ್ರೀ ಶ್ರೀ ರಾಮಕೃಷ್ಣ ಲೀಲಾಪ್ರಸಂಗ' ಗ್ರಂಥವನ್ನು ಅನುಸರಿಸಿಯೇ ನಾನು 'ಶ್ರೀ ಶ್ರೀ ರಾಮಕೃಷ್ಣ ಭಾಗವತಮ್' ಗ್ರಂಥವನ್ನು ರಚಿಸಿದ್ದು. ಹೀಗಿದ್ದರೂ ಕೂಡ ನಾನು ನನ್ನ ಗ್ರಂಥರಚನೆಯ ಕಾಲದಲ್ಲಿ, ಯಾವ ಘಟನೆಗಳು ಪ್ರಮಾಣೀಭೂತವಾದ ಗ್ರಂಥಗಳಲ್ಲಿಯೂ ಇಲ್ಲವೊ, ಸತ್ಯವೆಂದು ಸಿದ್ಧವಾದ ಅಂತಹ ಒಂದೆರಡು ಘಟನೆಗಳನ್ನು ಸಂಗ್ರಹಿಸಿ ಬರೆದಿದ್ದೇನೆ.

ಒಮ್ಮೆ ಕಾಮಾರಪುಕುರದ ಅತ್ಯಂತ ಶ್ರೀಮಂತ ಜಮೀನ್ದಾರನಾದ ಲಾಹಾ ಬಾಬುವಿನ ಮನೆಯಲ್ಲಿ ಶ್ರಾದ್ಧದ ಸಂದರ್ಭದಲ್ಲಿ ಪಂಡಿತರ ವಿದ್ವತ್‌ಸಭೆಯೊಂದು ನಡೆಯಿತು. ಆಗಿನ ಕಾಲದಲ್ಲಿ ಇಂತಹ ಸಂದರ್ಭಗಳಲ್ಲಿ ವಿದ್ವತ್‌ಸಭೆಗಳನ್ನು ನಡೆಸುವ ಪದ್ಧತಿ ಶ್ರೀಮಂತರು ಹಾಗೂ ಜಮೀನ್ದಾರರಲ್ಲಿ ಇತ್ತು. ಇಂದಿನ ಸಭೆಯಲ್ಲಿ ಅನೇಕ ಪಂಡಿತರು ಉಪಸ್ಥಿತರಿದ್ದರು. ಸಭೆ ನಡೆಯುತ್ತಿದ್ದಾಗ ಅನೇಕ ವರ್ಷಗಳಿಂದ ಹೊಟ್ಟೆನೋವಿನಿಂದ ಪೀಡಿತನಾಗಿದ್ದ ಒಬ್ಬ ಬ್ರಾಹ್ಮಣ ಯುವಕ ಅಲ್ಲಿಗೆ ಬಂದ. ಅಲ್ಲಿ ನೆರೆದಿದ್ದ ಪಂಡಿತರನ್ನುದ್ದೇಶಿಸಿ ಹೀಗೆ ಹೇಳಿದ: "ಸುಮಾರು ಇಪ್ಪತ್ತು ವರ್ಷಗಳಿಂದ ನಾನು ಭಯಂಕರವಾದ ಹೊಟ್ಟೆ ನೋವಿನಿಂದ ನರಳುತ್ತಿದ್ದೇನೆ. ಅನೇಕ ಕಡೆಗಳಲ್ಲಿ ಬಹಳಷ್ಟು ಚಿಕಿತ್ಸೆ ಮಾಡಿಸಿಕೊಂಡರೂ ನನ್ನ ಈ ರೋಗ ಗುಣವಾಗಲಿಲ್ಲ. ಆಗ ಬಾಬಾ ತಾರಕನಾಥನ (ಬಂಗಾಳದ ಪ್ರಸಿದ್ಧ ಶಿವಕ್ಷೇತ್ರದ ದೇವರ ಹೆಸರು) ಮುಂದೆ ನಿರಶನ ಕೈಗೊಂಡೆ. ರಾತ್ರಿಯಲ್ಲಿ ಭಗವಂತ ಸ್ವಪ್ನದಲ್ಲಿ ಕಾಣಿಸಿಕೊಂಡನು. ನನಗೆ ಈ ರೀತಿ ಸಲಹೆ ನೀಡಿದನು, 'ನಿನ್ನ ಗ್ರಾಮದ ಕೊನೆಯಲ್ಲಿ ಚಂಡಾಲನೊಬ್ಬ ವಾಸಿಸುತ್ತಿದ್ದಾನೆ. ನೀನು ಸ್ನಾನ ಆಹ್ನಿಕಗಳನ್ನು ಮುಗಿಸಿಕೊಂಡು ಭಕ್ತಿಯಿಂದ ಆ ಚಂಡಾಲನಿಗೆ ನಮಸ್ಕರಿಸಿ ಅವನ ಪಾದ ತೊಳೆದ ನೀರನ್ನು ಕುಡಿಯಬೇಕು. ಅನಂತರ ಅವನು ಊಟ ಮಾಡಿದ ಎಂಜಲನ್ನು ಕೇಳಿ ಪಡೆದು ಅದನ್ನು ಯಾವುದೇ ರೀತಿಯ ಅಸಹ್ಯಭಾವನೆಯಿಲ್ಲದೆ ತಿನ್ನಬೇಕು. ಆಗ ನಿನ್ನ ರೋಗ ಹೊರಟುಹೋಗುತ್ತದೆ.' ಈಗ ಸಮಸ್ಯೆಯೆಂದರೆ, ನಾನು ಹಾಗೆ ಮಾಡಿದಲ್ಲಿ ಸಮಾಜವು ನನ್ನನ್ನು ಜಾತಿಯಿಂದ ಹೊರಗೆ ಹಾಕುತ್ತದೆ. ನೀವೆಲ್ಲ ಪಂಡಿತರು ಇಲ್ಲಿ

ಸೇರಿದ್ದೀರಿ. ನೀವೇ ನಿಶ್ಚಯಿಸಿ ಹೇಳಿ. ಬಾಬಾ ತಾರಕನಾಥನ ಸಲಹೆಯಂತೆಯೂ ನಾನು ನಡೆದುಕೊಳ್ಳಬೇಕು, ಅದೇ ಸಮಯದಲ್ಲಿ ನನ್ನ ಜಾತಿಯನ್ನೂ ಉಳಿಸಿಕೊಳ್ಳಬೇಕು. ಅದರ ವಿಧಾನ ಹೇಗೆ?"

ಅನಂತರ ಪಂಡಿತರು ಈ ವಿಷಯವನ್ನು ತೆಗೆದುಕೊಂಡು, ತರ್ಕ–ವಿತರ್ಕಗಳ ದೊಡ್ಡ ಕೋಲಾಹಲವನ್ನೇ ಎಬ್ಬಿಸಿದರು. ಆದರೆ ಸಮಾಧಾನಕರವಾದ ಯಾವುದೇ ಉತ್ತರ ಸಿಕ್ಕಲಿಲ್ಲ. ಈ ಸಭೆಯ ಶ್ರೋತೃವೃಂದದ ಮಧ್ಯೆ ಗದಾಧರನೂ ಇದ್ದನು. ಅವನು ಪಂಡಿತರ ಬಳಿಗೆ ಹೋಗಿ ಹೀಗೆ ಸವಿನಯದಿಂದ ಪ್ರಾರ್ಥಿಸಿದನು, "ನೀವು ಅನುಮತಿ ನೀಡುವುದಾದರೆ ನಾನೊಂದು ಮಾತು ಹೇಳಲು ಬಯಸುತ್ತೇನೆ." ಹುಡುಗನೊಬ್ಬ ಈ ರೀತಿ ಇದ್ದಕ್ಕಿದ್ದಂತೆ ತಮ್ಮ ಬಳಿ ಬಂದು ಹೀಗೆ ಮಾತನಾಡಿದ್ದನ್ನು ಕಂಡು ಅವರೆಲ್ಲರೂ ಅವಾಕ್ಕಾದರು! ಆದರೂ ಹೀಗೆ ಹೇಳಿದರು: "ಒಳ್ಳೆಯದು, ಹೇಳು ನೋಡೋಣ." ಬಾಲಕ ಗದಾಧರ ಉತ್ತರಿಸಿದ: "ಒಂದು ವೇಳೆ ಈ ವ್ಯಕ್ತಿ ಆ ಚಂಡಾಲನನ್ನು ಪುರುಷೋತ್ತಮ ಕ್ಷೇತ್ರಕ್ಕೆ (ಪುರಿಗೆ) ಕರೆದುಕೊಂಡು ಹೋಗಿ ಅಲ್ಲಿ ಜಗನ್ನಾಥನ ಅನ್ನಪ್ರಸಾದವನ್ನು ಅವನಿಗೆ ತಿನ್ನಿಸಿ, ಉಚ್ಛಿಷ್ಟ ಅನ್ನಪ್ರಸಾದವನ್ನು ತಾನು ಸೇವಿಸಿದರೆ ಆಗ ಬಾಬಾ ತಾರಕನಾಥನ ಆದೇಶದಂತೆ ನಡೆದಂತೆಯೂ ಆಗುತ್ತದೆ ಹಾಗೂ ಜಾತಿಯಿಂದ ಚ್ಯುತನಾಗುವ ಭಯವೂ ಇರದು!" ಬಾಲಕನ ಆ ಮಾತುಗಳನ್ನು ಕೇಳಿದ ಪಂಡಿತರು ಸ್ತಂಭೀಭೂತರಾಗಿಬಿಟ್ಟರು! ಅವರೆಲ್ಲರೂ ಏಕಕಂಠದಿಂದ ಬಾಲಕನ ಅಭಿಪ್ರಾಯವನ್ನು ಸಮರ್ಥಿಸುತ್ತ, ಅವನಿಗೆ ಆಶೀರ್ವದಿಸುತ್ತ, ಹೀಗೆ ನುಡಿದರು: "ಮಗು, ನೀನು ಸಾಧಾರಣನಲ್ಲ! ನಾವೆಲ್ಲರೂ ನಿನ್ನಲ್ಲಿ ಜಗದ್ಗುರುವಿನ ಲಕ್ಷಣವನ್ನು ನೋಡುತ್ತಿದ್ದೇವೆ. ಕಾಲಕ್ರಮದಲ್ಲಿ ಅದು ನಿಜವಾಗಲಿದೆ!" 'ಶ್ರೀರಾಮಕೃಷ್ಣ ಲೀಲಾಪ್ರಸಂಗ' ದಲ್ಲಿ ಶಾಸ್ತ್ರೀಯ ಪ್ರಶ್ನೆಯೊಂದನ್ನು ಗದಾಧರ ಸಮರ್ಪಕವಾಗಿ ಉತ್ತರಿಸಿದ ಎಂಬ ಉಲ್ಲೇಖವಿದೆ. ಆದರೆ ಆ ಪ್ರಶ್ನೆ ಯಾವುದೆಂಬ ಪ್ರಸ್ತಾಪ ಇಲ್ಲ.

ಶ್ರೀರಾಮಕೃಷ್ಣರು ಒಮ್ಮೆ ನನಗೆ ಕನಸಿನಲ್ಲಿ ಕಾಣಿಸಿಕೊಂಡು ತಮ್ಮ ಜೀವನದ ವೃತ್ತಾಂತವೊಂದನ್ನು ತಿಳಿಸಿದರು: "ಹೇ ಪಂಡಿತ, ನಿಮಗೆಲ್ಲರಿಗೂ ಗೊತ್ತಿರುವಂತೆ ನಾನೊಬ್ಬ ಮೂರ್ಖ. ಆದರೆ, ಹೊರಗಿನ ಈ ಮೌಢ್ಯ ನನ್ನ ಮಾರುವೇಷವಷ್ಟೆ. ಒಂದು ಬಾರಿ ನನ್ನ ಯುವಭಕ್ತನಾದ ವೈಕುಂಠನಾಥ ಸನ್ಯಾಲನಿಗೆ, 'ನೀನು ರಾಮಾಯಣದಿಂದ ಶಬರಿಯ ವೃತ್ತಾಂತವನ್ನು ಓದಿ ಶ್ರವಣ ಮಾಡಿಸು' ಎಂದು ಹೇಳಿದೆ. ಸನ್ಯಾಲ್ ಮೂಲಸಂಸ್ಕೃತವನ್ನು ಓದದೆ, ಅದರ ಬಂಗಾಳಿ ಅನುವಾದವನ್ನು ಮಾತ್ರವೇ ಓದಲು ಆರಂಭಿಸಿದ. ಸಂಸ್ಕೃತದಲ್ಲಿ ಓದಿದರೆ ನನಗೆ ಅರ್ಥವಾಗದೆಂದು ಅವನು ತಿಳಿದಿದ್ದ. ನಾನು ಅವನಿಗೆ ಹೇಳಿದೆ, 'ನೀನು ಸಂಸ್ಕೃತ ಮೂಲವನ್ನೇ ಓದು' ಎಂದು. ವೈಕುಂಠ ನನ್ನ ಆ ಮಾತನ್ನು ಕೇಳಿ ಆಶ್ಚರ್ಯದಿಂದ ಬಾಯಿ ತೆರೆದು, ನನ್ನತ್ತಲೇ ನೋಡಲಾರಂಭಿಸಿದ. ನಾನೊಬ್ಬ ನಿರಕ್ಷರಕುಕ್ಷಿ. ಹೀಗಾಗಿ ವಾಲ್ಮೀಕಿಯ ಸಂಸ್ಕೃತ ನನಗೆ ಹೇಗೆ ತಿಳಿಯುತ್ತದೆ ಎಂದು ಅವನ ಭಾವನೆ. ಆಗ ನಾನು ಅವನಿಗೆ ಹೇಳಿದೆ, 'ರಾಮಾಯಣ ಯಾರ ಕಥೆಯೋ ಅವನು ಇದರ ಮಧ್ಯೆಯೆ ಇದ್ದಾನೆ. ಆದ್ದರಿಂದ ರಾಮಾಯಣದಲ್ಲಿ ಏನೇನು



ಬರೆದಿದೆಯೊ ಎಲ್ಲ ಇವನಿಗೆ ಗೊತ್ತು. ನಂಬಿಕೆ ಉಂಟಾಗದಿದ್ದರೆ ಇಲ್ಲಿ ಕೇಳು.' ಹೀಗೆನ್ನುತ್ತ ನಾನು ರಾಮಾಯಣದ ಅರಣ್ಯಕಾಂಡದ ೭೪ ನೆಯ ಅಧ್ಯಾಯದಿಂದ ಮೂಲ ಸಂಸ್ಕೃತ ಶ್ಲೋಕಗಳನ್ನು ಉಚ್ಚರಿಸಲು ಆರಂಭಿಸಿದೆ. ಓ ಪಂಡಿತ ನೀನೂ ಅದನ್ನು ಕೇಳು." ಹೀಗೆನ್ನುತ್ತ, ಶ್ರೀರಾಮಕೃಷ್ಣರು ನನ್ನ ಬಳಿಯೂ ಮೂಲ ವಾಲ್ಮೀಕಿ ರಾಮಾಯಣದಿಂದ ಅರಣ್ಯಕಾಂಡದ ೭೪ ನೆಯ ಅಧ್ಯಾಯದ ಶ್ಲೋಕಗಳನ್ನು ಅತ್ಯಂತ ಸ್ಪಷ್ಟವಾಗಿ, ತಪ್ಪಿಲ್ಲದೆ ಉಚ್ಚರಿಸಲು ಆರಂಭಿಸಿದರು.

ಹೀಗೆ ಅವರ ಮುಖದಿಂದ ಅಪೂರ್ವವಾದ ಸಂಸ್ಕೃತ ಉಚ್ಚಾರಣೆಯನ್ನು ಕೇಳಿ ನಾನು ಆಶ್ಚರ್ಯಪಟ್ಟೆ. ಅನಂತರ ಹೇಳಿದರು, "ವೈಕುಂಠನಾಥ ನನ್ನ ಮಾತುಗಳನ್ನು ಕೇಳಿ ದಿಙ್ಮೂಢನಾದ. ಜಿಗಣೆಯ ಬಾಯಿಗೆ ಸುಣ್ಣ ಬಿದ್ದರೆ, ಹೇಗಿರುತ್ತದೋ ಹಾಗಾಗಿತ್ತು ಅವನ ಅವಸ್ಥೆ. ಯಾವ ಮಾತುಗಳೂ ಅವನ ಬಾಯಿಯಿಂದ ಹೊರಬರುತ್ತಿರಲಿಲ್ಲ. ಕಾರಣ, ಅವನು ಆ ಸಮಯದಲ್ಲಿ ತನ್ನೆದುರಿಗೆ ಶ್ರೀರಾಮಚಂದ್ರ, ಲಕ್ಷ್ಮಣ ಹಾಗೂ ಶಬರಿಯರನ್ನೇ ಕಾಣುತ್ತಿದ್ದ! ಸ್ವಲ್ಪ ಕಾಲದ ನಂತರ ಪ್ರಕೃತಿಸ್ಥನಾಗಿ ನನಗೆ ನಮಸ್ಕಾರ ಮಾಡುತ್ತ, ಮೂಲ ಸಂಸ್ಕೃತ ಶ್ಲೋಕಗಳನ್ನೇ ಪಠಿಸಲು ಆರಂಭಿಸಿದ. ಪಂಡಿತ, ನೀನೂ ನೋಡು. ರಾಮಚಂದ್ರನ ರೂಪದಲ್ಲಿ ಬಂದು ಶಬರಿಯ ಮೇಲೆ ಹೇಗೆ ನಾನು ಕೃಪೆ ಮಾಡಿದೆ ಎಂಬುದಾಗಿ." ಹೀಗೆಂದವರೇ ಶ್ರೀರಾಮಕೃಷ್ಣರು ನನ್ನ ಮೇಲೆ ದಯೆಗೈದು ನನಗೂ ಅವೆಲ್ಲವನ್ನೂ ತೋರಿಸಿಕೊಟ್ಟರು.

ಅದೇನೇ ಇರಲಿ. ಸ್ವಪ್ನದಲ್ಲಿ ಶ್ರೀರಾಮಕೃಷ್ಣರು ತಮ್ಮ

ಜೀವನಚರಿತ್ರೆಯನ್ನು ಬರೆಯಲು ನನಗೆ ಆದೇಶ ನೀಡಿದ್ದು, ಒಮ್ಮೆ ಮಾತ್ರ ಅಲ್ಲ, ಅನೇಕ ಬಾರಿ. ಮೊದಮೊದಲು ನಾನೂ ಈ ಕನಸುಗಳು ಆಕಸ್ಮಿಕವೆಂದು ಭಾವಿಸಿದ್ದೆ. ಅದಕ್ಕಾಗಿ ಜೀವನಚರಿತ್ರೆಗೆ ಸ್ವಲ್ಪ ವಿಷಯವನ್ನು ಸಂಗ್ರಹಿಸಿದ್ದು ಬಿಟ್ಟರೆ ಮತ್ತೆ ಅದರಲ್ಲಿ ನನ್ನನ್ನು ತೊಡಗಿಸಿಕೊಂಡಿರಲಿಲ್ಲ. ನನಗೆ ೮೦ ವರ್ಷ ತುಂಬಿದ್ದಾಗ ಶ್ರೀರಾಮಕೃಷ್ಣರು ಮತ್ತೊಮ್ಮೆ ನನಗೆ ಕನಸಿನಲ್ಲಿ ದರ್ಶನ ನೀಡಿ ತಮ್ಮ ಜೀವನಚರಿತ್ರೆಯನ್ನು ಸಂಸ್ಕೃತದಲ್ಲಿ ಬರೆಯುವಂತೆ ಪುನಃ ಆದೇಶಿಸಿದರು. ನಾನು ಅವರಿಗೆ ನನ್ನ ಮುದಿವಯಸ್ಸು ಹಾಗೂ ಅನಾರೋಗ್ಯದ ಕಾರಣವನ್ನು ಕೊಟ್ಟಾಗ ಅವರು ನನಗೆ ಹೇಳಿದರು, "ನೀನೇನೂ ಚಿಂತಿಸಬೇಡ. ಬರೆಯಲು ಆರಂಭಿಸು."

ನನ್ನ ಈ ಮಾತುಗಳನ್ನು ಅನೇಕರು ನಂಬಲಾರರು. ಆದರೆ, ನಾನು ಅವರಿಂದ ಸ್ವಪ್ನದಲ್ಲಿ ಅನೇಕ ಬಾರಿ ಆದೇಶ ಪಡೆದು ನನ್ನ ಎಂಬತ್ತನೆಯ ವಯಸ್ಸಿನಲ್ಲಿ ಅವರ ಜೀವನಚರಿತ್ರೆಯನ್ನು ಕಾವ್ಯರೂಪದಲ್ಲಿ ಬರೆದು ಮುಗಿಸಿದ್ದೇನೆ. ಅವರ ಆಶೀರ್ವಾದದ ಶಕ್ತಿಯಿಂದಲೇ ನಾನು **'ಶ್ರೀ ಶ್ರೀರಾಮಕೃಷ್ಣ ಭಾಗವತಮ್'** ರಚಿಸಲು ಹಾಗೂ ಪ್ರಕಟಿಸಲು ಸಾಧ್ಯವಾದದ್ದು. ಅವರು ನನಗೆ ಕನಸಿನಲ್ಲಿ ಕಾಣಿಸಿಕೊಂಡು ಅನೇಕ ಕಡೆಗಳಲ್ಲಿ ನನ್ನ ಸಂದೇಹಗಳನ್ನು ನಿವಾರಿಸಿದ್ದಾರೆ, ಪ್ರಯೋಜನಕಾರಿಯಾದ ಅನೇಕ ಸಲಹೆಗಳನ್ನೂ ಕೊಟ್ಟಿದ್ದಾರೆ. ನಾನೊಬ್ಬ ದರಿದ್ರ ಬ್ರಾಹ್ಮಣ. ಆದರೆ ಗ್ರಂಥಪ್ರಕಟನೆಗಾಗಿ ಬೇಕಾದ ಹಣವನ್ನು ಕುರಿತೂ ನಾನು ಚಿಂತಿಸಬೇಕಾಗಿ ಬರಲಿಲ್ಲ. ಭಾರತ ಸರ್ಕಾರ ಅದಕ್ಕಾಗಿ ಅನುದಾನ ನೀಡಿತು. ಬಹಳ ಜನ ವಿದ್ವಾಂಸರು ಅದನ್ನು ಮೆಚ್ಚಿಕೊಂಡಿದ್ದಾರೆ. ಹಾಗೆ ಮೆಚ್ಚಿಕೊಂಡವರಲ್ಲಿ ಪ್ರಮುಖರಾದವರು ಭಾರತದ ಸುವಿಖ್ಯಾತ ಪಂಡಿತರೂ, ರಾಷ್ಟ್ರಮಟ್ಟದ ಅಧ್ಯಾಪಕರೂ ಆದ ಸುನೀತಿಕುಮಾರ್ ಚಟ್ಟೋಪಾಧ್ಯಾಯ, ಭಾರತದ ಪ್ರಧಾನಮಂತ್ರಿಯಾಗಿದ್ದ ಇಂದಿರಾ ಗಾಂಧಿ ಮತ್ತು ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಪರಮಾಧ್ಯಕ್ಷರಾದ ಸ್ವಾಮಿ ವೀರೇಶ್ವರಾನಂದಜಿ ಅವರು. ನನ್ನ ಹೃದಯಾಂತರಾಳದಿಂದ, ಶ್ರೀರಾಮಕೃಷ್ಣರು ಮಾನವ ದೇಹ ಧಾರಣೆ ಮಾಡಿರುವ ಸ್ವಯಂ ಭಗವಂತನೇ ಎಂಬುದಾಗಿ ಅರಿತಿದ್ದೇನೆ. ಅವರ ಕೃಪೆಯಿಂದ ಮೂಕನೂ ವಾಚಾಳಿಯಾದಾನು, ಹೆಳವನೂ ಪರ್ವತವನ್ನೇ ದಾಟಬಲ್ಲನು. ಅವರ ಅಮೋಘವಾದ ಆಶೀರ್ವಾದ ನನ್ನ ಜೀವನದಲ್ಲಿ ಅಕ್ಷರಶಃ ನಿಜವಾಗಿದೆ. ಅವರು ಹೇಳಿದ್ದರು, "ನೀನು ದೀರ್ಘಾಯುಷಿಯೂ ಪಂಡಿತನೂ ಆಗುವೆ" ಎಂದು. ಅದರಂತೆಯೇ ನಾನು ದೀರ್ಘಾಯುಷಿಯೂ ಆಗಿದ್ದೇನೆ, ಪಂಡಿತನೂ ಆಗಿದ್ದೇನೆ.

ನಾನು ಶ್ರೀರಾಮಕೃಷ್ಣರನ್ನು ನೋಡಿದ್ದೇನೆ; ಅವರ ಪಾದಗಳನ್ನು ಸ್ಪರ್ಶಿಸಿದ್ದೇನೆ. ನನ್ನ ಅರಿವಿಗೆ ಬಂದಿದೆಯೋ ಇಲ್ಲವೋ, ಭಗವಾನ್ ಶ್ರೀರಾಮಕೃಷ್ಣರಂತೂ ನನ್ನನ್ನು ನೋಡಿದ್ದಾರೆ, ನನ್ನ ತಲೆಯನ್ನು ಸ್ಪರ್ಶಿಸಿದ್ದಾರೆ. ಅದು ಕೇವಲ ಒಂದೇ ಒಂದು ಸಲವಾದರೇನು! ಒಂದು ಬಾರಿ ಅವರ ದರ್ಶನ ಹಾಗೂ ಸ್ಪರ್ಶನದಿಂದಲೇ ಅವರು ನನ್ನನ್ನು ಅನಂತ ಸೌಭಾಗ್ಯಕ್ಕೆ ಅಧಿಕಾರಿಯನ್ನಾಗಿ ಮಾಡಿದ್ದಾರೆಂಬುದು ನನಗೆ ಮಾತ್ರ ಗೊತ್ತು!

**ಮಾ**ಸ್ಟರ್ ಮಹಾಶಯನು ಒಂದು ಸಲ ವಚನವೇದವು ಹುಟ್ಟಿದುದು ಹೇಗೆ ಎಂದು ಹೇಳುತ್ತ ಹೀಗೆ ಹೇಳಿದನು: "ನಾನು ಪ್ರಾಪಂಚಿಕ ಕೆಲಸಕಾರ್ಯಗಳಲ್ಲಿ ತೊಡಗಿದ್ದೆ; ನನ್ನ ಹುದ್ದೆಗೆ ಅಂಟಿಕೊಂಡಿದ್ದೆ. ಆದಕಾರಣ ನನಗೆ ಇಷ್ಟವಾದಾಗಲೆಲ್ಲ ಹೋಗಿ ಶ್ರೀರಾಮಕೃಷ್ಣರನ್ನು ನೋಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಒಮ್ಮೆ ಅವರನ್ನು ಕಂಡು ಬಂದ ಮೇಲೆ ಇನ್ನೊಮ್ಮೆ ಕಾಣುವುದಕ್ಕೆ ಹೋಗುವ ಮೊದಲು, ವಿರಾಮ ಸಿಕ್ಕಿದಾಗಲೆಲ್ಲ ಅವರು ಹೇಳಿದುದನ್ನು ಚಿಂತಿಸುವುದಕ್ಕಾಗಿ ನಾನು ದಿನಚರಿಯನ್ನು ಬರೆಯತೊಡಗಿದೆ. ಅವರ ಮಾತುಗಳು ನನ್ನ ಮನಸ್ಸಿನ ಮೇಲೆ ಮಾಡಿದ ಪ್ರಭಾವವು ಪ್ರಾಪಂಚಿಕ ಕೆಲಸಗಳಿಂದ, ಜವಾಬ್ದಾರಿಗಳಿಂದ ಅಳಿಸಿಹೋಗಬಾರದು ಎಂಬುದಕ್ಕಾಗಿ ನಾನು ಬರೆದೆ. ಹೀಗೆ ನನ್ನ ಸ್ವಂತ ಪ್ರಯೋಜನಕ್ಕಾಗಿಯೇ, ಅವರ ಬೋಧನೆಗಳನ್ನು ಇನ್ನೂ ಸಂಪೂರ್ಣವಾಗಿ ಅರಿತುಕೊಳ್ಳುವ ಸಲುವಾಗಿಯೇ ನಾನು ಟಿಪ್ಪಣಿಗಳನ್ನು ಬರೆದುಕೊಂಡದ್ದು." ಮುಂದೆ ಸ್ವಾಮಿ ಶಿವಾನಂದರಾದ ತಾರಕನೂ ಒಮ್ಮೆ ಶ್ರೀರಾಮಕೃಷ್ಣರ ಬೋಧನೆಗಳನ್ನು ಕುರಿತು ಟಿಪ್ಪಣಿಗಳನ್ನು ಬರೆದುಕೊಳ್ಳಲಾರಂಭಿಸಿದನು. ಹಾಗೆ ಮಾಡಬೇಡವೆಂದು ಶ್ರೀರಾಮಕೃಷ್ಣರು ಹೇಳಿದುದರಿಂದ ಆ ಟಿಪ್ಪಣಿಗಳನ್ನೆಲ್ಲ ಗಂಗೆಗೆ ಎಸೆದುಬಿಟ್ಟನು. ಬರೆದುಕೊಳ್ಳುವ ಕೆಲಸ ಮಾಸ್ಟರ್ ಮಹಾಶಯನಿಗೆ ಮಾತ್ರವೇ ಮೀಸಲಾಗಿದ್ದಿತು. ವಚನವೇದವನ್ನು ಓದಿದವರಿಗೆ ಶ್ರೀರಾಮಕೃಷ್ಣರು ಕೆಲವೊಮ್ಮೆ, ಮಾಸ್ಟರ್ ಮಹಾಶಯನು ಬರುವವರೆಗೆ ಮುಖ್ಯವಾದ ಚರ್ಚೆಯನ್ನು ಆರಂಭಿಸುವುದಿಲ್ಲವೇನೋ ಎನ್ನಿಸದಿರದು. ಅಲ್ಲದೆ ಕೆಲವೊಮ್ಮೆ ಶ್ರೀರಾಮಕೃಷ್ಣರು ತಾವು ಹೇಳಿದ್ದನ್ನು ಮಾಸ್ಟರ್ ಮಹಾಶಯನಿಂದ ಇನ್ನೊಮ್ಮೆ ಹೇಳಿಸುತ್ತಿದ್ದರು. ಮಾಸ್ಟರ್ ಅದನ್ನು ಸರಿಯಾಗಿ ಗ್ರಹಿಸಿಲ್ಲವೆನ್ನಿಸಿದರೆ, ತಾವು ಹೇಳಿದುದರ ಅರ್ಥವನ್ನು ಅವನಿಗೆ ಮತ್ತೊಮ್ಮೆ ಮನದಟ್ಟು ಮಾಡಿಕೊಡುತ್ತಿದ್ದರು (ಆಧಾರ: ದೇವರೊಡನೆ ಬಾಳಿದವರು, ಭಾಗ–೨, ಪುಟ ೨೩೩)

"ಕಥಾಮೃತ (ಬಂಗಾಳಿ ವಚನವೇದ) ಮುದ್ರಣವಾಗುತ್ತಿರುವಾಗ ಅದು ನನ್ನ ಜವಾಬ್ದಾರಿಯಾಗಿತ್ತು. ಆದರೆ ನನಗೆ ಮಾಡಲು ಅನೇಕ ಕೆಲಸಗಳು ಇದ್ದುದರಿಂದ ಮುದ್ರಣದೋಷಗಳನ್ನು ತಿದ್ದುವ ಕೆಲಸವನ್ನು ಸಕಾಲದಲ್ಲಿ ಮಾಡಿಮುಗಿಸಲು ಸಾಧ್ಯವಾಗಲಿಲ್ಲ. ರಾತ್ರೆ ಒಂದು ಗಂಟೆ ಸುಮಾರಿನಲ್ಲಿ ಮಾಸ್ಟರ್ ಮಹಾಶಯರ ಕೊಠಡಿಯಲ್ಲಿ ದೀಪ ಉರಿಯುತ್ತಿದ್ದುದನ್ನು ನೋಡಿದೆ. ನೋಡಿದರೆ, ಮಾಸ್ಟರ್ ಮಹಾಶಯ ಸೀಮೆಯೆಣ್ಣೆ ದೀಪದಲ್ಲಿ ಪ್ರೂಫ್ ತಿದ್ದುತ್ತಿದ್ದಾರೆ! ಆಗ ಅವರ ಆರೋಗ್ಯವೂ ಚೆನ್ನಾಗಿರಲಿಲ್ಲ. ಅದಲ್ಲದೆ ಆ ಅಪರಾತ್ರಿಯಲ್ಲಿ ಕೆಲಸಮಾಡುತ್ತಿದ್ದುದರಿಂದ ಅವರ ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ಇದನ್ನು ನೋಡಿ ನನಗೆ ತುಂಬ ನೋವಾಯಿತು. ಪ್ರೀತಿಯಿಂದ ನಾನು ಅವರನ್ನು ಇದೇಕೆ ಹೀಗೆ ಮಾಡುತ್ತಿರುವಿರಿ ಎಂದು ಕೇಳಿದೆ. ಅವರೂ ಪ್ರೀತಿಯಿಂದಲೇ, "ಶ್ರೀರಾಮಕೃಷ್ಣರ ನಿತ್ಯನೂತನ ಸಂದೇಶವನ್ನು ಈ ಪುಸ್ತಕದಲ್ಲಿ ಓದಿ ಜನರು ಶಾಂತಿಯನ್ನು ಪಡೆಯುತ್ತಾರೆ. ದೇಹ ಎಂದಾದರೂ ಕೊನೆಗೊಳ್ಳಲೇಬೇಕಲ್ಲವೇ? ಜನರಲ್ಲಿ ಶಾಂತಿಯನ್ನು ಹರಡುವುದಕ್ಕೆಂದು ಅದನ್ನು ಬಳಸುವುದು ಒಳ್ಳೆಯದೇ ಅಲ್ಲವೇ? ನಾವು ಪ್ರಪಂಚದಲ್ಲಿರುವವರು ಇಲ್ಲಿ ತುಂಬಿರುವ ನೋವನ್ನು ಅನುಭವಪಡುತ್ತಿದ್ದೇವೆ. ಆದರೂ ನಾನು, ಶ್ರೀ ಶ್ರೀ ರಾಮಕೃಷ್ಣ ಕಥಾಮೃತದ ಮೂಲಕ ಈ ನೋವನ್ನು ಮರೆತಿದ್ದೇನೆ. ಆದ್ದರಿಂದಲೇ ಈ ಪುಸ್ತಕ ಬೇಗ ಹೊರಬರಲಿ ಎಂದು ಶ್ರಮಿಸುತ್ತಿದ್ದೇನೆ" ಎಂದರು. ನಿಜಕ್ಕೂ ಮಾಸ್ಟರ್ ಮಹಾಶಯ ಮರಣಹೊಂದಿದ್ದು ಪುಸ್ತಕದ ಕೊನೆಯ ಸಂಪುಟದ ಕೊನೆಯ ಭಾಗವು ಮುದ್ರಣದಲ್ಲಿ ಇರುವಾಗಲೇ. ಅವರು ಹುಟ್ಟಿದ್ದು ಶ್ರೀ ಶ್ರೀ ರಾಮಕೃಷ್ಣ ಕಥಾಮೃತವನ್ನು ಬರೆದು ಪ್ರಚುರಪಡಿಸುವುದಕ್ಕಾಗಿಯೇ."

–ಸ್ವಾಮಿ ನಿತ್ಯಾತ್ಮಾನಂದ (ಆಧಾರ: ದೇವರೊಡನೆ ಬಾಳಿದವರು, ಭಾಗ–೨, ಪುಟ ೨೪೧)